


ಎಡದಿಂದ ಬಲಕ್ಕೆ:

1. ಆ ಸಮಿತಿಯ ತೀರ್ಮಾನ ಒಪ್ಪಿಗೆ ಪಡೆದಿಲ್ಲ 4
3. ಹಯಗ್ರೀವನನ್ನು ಮೆಚ್ಚಿಸಲು ಹಾಲುಮೊಸರು ಸಾಕೇ? 3
4. ಹಾರೈಸಿದ್ದನ್ನು ಕೇಳಿಯೇ ಹಳ್ಳಿಯವನಿಗೆ ಭಾರೀ ಸಂತಸ 3
6. ವಿರಾಮವನ್ನೇ ಸದಾ ಬಯಸುವವರಿಗೆ ಸಂಪಾದನೆ ಹೇಗೆ 4
7. ಹಗುರವಾದ ವಸ್ತುಗಳನ್ನೇ ಕೊಳ್ಳಬೇಕೆಂದು ಆತನ ಕೆಟ್ಟ ಹಠ 4
9. ಒಂಬತ್ತು ಜನ ವನಿತೆಯರು ಒಟ್ಟಾಗಿ ಕಡೆದು ತೆಗೆದ ಬೆಣ್ಣೆ 4
12. ಚೆನ್ನಾಗಿ ಬೈಯಲಿಕ್ಕೆ ಅವಕಾಶ ಸಿಗಬೇಕೆಂಬುದೇ ಆಕೆಯ ಆಸೆ 4
14. ಹೂ ಭರಿತ ಮರವನ್ನು ಹತ್ತಿಳಿದ ಶೂರ ಹಿಂದುಮುಂದಾಗಿ ನಿಂತ 3
15. ಹಾಡಿಗೆ ತಕ್ಕಂತೆ ತಾಳ ಹಾಕುವುದರಲ್ಲೇ ಆತ ಮೈಮರೆತಿದ್ದಾನೆ 3
16. ದುಷ್ಟನಂತೆ ವರ್ತಿಸುವಾತನದು ಎಂಥ ಧೈರ್ಯ ನೋಡಿದಿರಾ? 4

ಮೇಲಿಂದ ಕೆಳಕ್ಕೆ:

1. ಅಷ್ಟೂ ಜನರನ್ನು ಕಾಪಾಡುವ ಆಶ್ವಾಸನೆ ಆಚರಣೆಗೆ ಬರಬೇಕು 4
2. ಹಬ್ಬದಂದು ತರುವ ವಸ್ತುಗಳ ಮೇಲೆ ಹತೋಟಿ ಬಂದಿದೆ 4
3. ಹಾಗೆಯೇ ಇರುವ ವರೆಗೆ ಕಿಂಚಿತ್ತೂ ಭಾರ ಇರದು 3
5. ಸಂಗ್ರಾಮಕ್ಕೆ ಸಿದ್ಧತೆ ಸಂಪೂರ್ಣ 3
6. ಅಧರ್ಮವನ್ನೆಲ್ಲ ಕೈಬಿಟ್ಟ ನಂತರ ಇಷ್ಟೆಲ್ಲ ಪ್ರಗತಿ, ಮುನ್ನಡೆ 4
8. ಹವಾಗುಣಕ್ಕೆ ತಕ್ಕಂತೆ ಉಡುಪುಗಳ ಸಿದ್ಧತೆ ನಡೆದಿದೆ 4
10. ಸದಾ ವಟಗುಟ್ಟುವ ಜನರ ವಾಸಕ್ಕೆ ಇಂಥ ಗುಂಪು ವಸತಿಯೇ ಸರಿ 3
11. ಹಳತಾದರೂ ಭದ್ರವಾಗಿ ನಿಲ್ಲಲು ಒಳ್ಳೆಯ ಅಡಿಪಾಯ ಬೇಕು 4
12. ಹಿಡಿದು ತಂದದ್ದನ್ನೆಲ್ಲ ಕೈ ಬಿಟ್ಟಿದ್ದು ಭಾರೀ ಪೆದ್ದತನ 4
13. ಎಷ್ಟು ವಿನಯವಂತ ನೋಡಿ, ಆ ಅನ್ಯದೇಶೀಯ ! 3

---

## 24.1. 2019ರ ಸರಿ ಉತ್ತರಗಳು

ಎಡದಿಂದ ಬಲಕ್ಕೆ:
1. ಪ್ರತಾಪ 3.ತಾಂಡವ 4.ಲಾಮಂಚ 6. ರಮೇಶ 7. ಹಿಮಾಲಯ 9. ಜಣಜಣ 11. ನವಧಾಮ 13.ತಲೆಹೋಕ 15. ಮರುಕ 17. ನವೀನ 18. ಕರುಣೆ 19. ವಿಭವ

ಮೇಲಿಂದ ಕೆಳಕ್ಕೆ:
1. ಪ್ರವರ 2.ಪಲಾಶ 3. ತಾಂಬೂಲ 5. ಚರಣ 7. ಹಿರಿತನ 8. ಯಥಾಕ್ರಮ 9. ಜಜ್ಜರಿತ 'ಣವಾಡಿಕ' (=ಕಡಿವಾಣ ತಲೆಕೆಳಗು) 12. ಧಾವನ 14. ಲೆಕ್ಕಣಿ (=ಲೆಕ್ಕಣಿಕೆ) 15. ಮನವಿ 16. ಕಕವ

ಪ್ರಶ್ನಾಂಕಣ

# ಲೀಮರ್: ಆದೆಂಥ ಪ್ರಾಣಿ?

ಲೀಮರ್ ಅದು ಸಸ್ತನಿ ಸಂಕುಲದ, ಪ್ರೈಮೇಟ್ ವರ್ಗಕ್ಕೆ ಸೇರಿದ ಒಂದು ಅತಿ ವಿಶಿಷ್ಟ ಪ್ರಾಣಿ. ಹಾಗೆಂದರೆ ಲೀಮರ್ ಮಂಗಗಳಿಗೂ, ವಾನರರಿಗೂ ಮತ್ತು ನಮಗೂ ಜೈವಿಕವಾಗಿ ಅತ್ಯಂತ ನಿಕಟ ಸಂಬಂಧಿ ಎಂಬುದು ಸ್ಪಷ್ಟ ತಾನೇ? ಲೀಮರ್‌ಗಳಲ್ಲಿ ಎಂಟು ಕುಟುಂಬಗಳಿವೆ; 15 ವಂಶಗಳಿವೆ; 105 ಪ್ರಭೇದಗಳಿವೆ. ವಿಸ್ಮಯ ಏನೆಂದರೆ, ಸಕಲ ವಿಧ ಮತ್ತು ಪ್ರಭೇದಗಳ ಲೀಮರ್‌ಗಳೂ ಇಡೀ ಜಗದಲ್ಲಿ ಒಂದೇ ಒಂದು ದ್ವೀಪಕ್ಕೆ ಸೀಮಿತವಾಗಿವೆ! ಆಫ್ರಿಕಾ ಖಂಡದ ಆಗ್ನೇಯ ದಿಕ್ಕಿನಲ್ಲಿರುವ 'ಮಡಗಾಸ್ಕರ್' ದ್ವೀಪದಲ್ಲಷ್ಟೇ (ಚಿತ್ರ1 ರ ಭೂಪಟದಲ್ಲಿ ಗಮನಿಸಿ) ಎಲ್ಲ ಲೀಮರ್‌ಗಳೂ ನೈಸರ್ಗಿಕ ನೆಲೆ ಹೊಂದಿವೆ.

ಲೀಮರ್‌ಗಳಲ್ಲಿ ಹಲವಾರು ವಿಧಗಳಿವೆ: ಲೀಮರ್, ಇಂದ್ರಿ, ಸಿಫಾಕಾ, ಗಲಾಗೋ, ಪೋಟ್ಟೋ, ಬುಶ್ ಬೇಬಿ, ಲೋರಿಸ್, ಆಯ್ ಆಯ್... ಇತ್ಯಾದಿ (ಅಂಥ ಮೂರು ವಿಧಗಳನ್ನು ಚಿತ್ರಗಳಲ್ಲಿ ನೋಡಿ). ಲೀಮರ್‌ಗಳದೆಲ್ಲ ಕುಬ್ಜ ಗಾತ್ರ; ಇಲಿಗಳಷ್ಟೇ ಗಾತ್ರದಿಂದ ಪುಟ್ಟ ಮಂಗಗಳ ಗಾತ್ರದವರೆಗೆ. ಜೊತೆಗೆ ಉದ್ದ ಮೂಗು ಮತ್ತು ಭಾರೀ ಕಣ್ಣುಗಳ ಈ ಪ್ರಾಣಿಗಳು ಮೇಲ್ನೋಟಕ್ಕೆ ಮೂಷಿಕಗಳಂತೆ, ಮಂಗಗಳಂತೆ, ಮುಂಗುಸಿಗಳಂತೆ ಗೋಚರಿಸುತ್ತವೆ. ನೆಲದಲ್ಲೂ, ವೃಕ್ಷಗಳ ಮೇಲೂ ಸಲೀಸಾಗಿ ಓಡಾಡಬಲ್ಲ, ಹತ್ತಿಳಿಯಬಲ್ಲ




ಸಾಮರ್ಥ್ಯ ಇವಕ್ಕಿದೆ. ಮಡಗಾಸ್ಕರ್‌ನ ಎಲ್ಲ ಜೀವಾವಾರಗಳಲ್ಲೂ ಎಂದರೆ ವೃಷ್ಟಿವನ, ಎಲೆ ಉದುರುವ ಅಡವಿ, ಜೌಗು ಭೂಮಿ, ಬಂಡೆ ಪ್ರದೇಶ, ಪರ್ವತಾವಾರ ಇತ್ಯಾದಿ ಎಲ್ಲೆಡೆಗಳಲ್ಲೂ ಅಲ್ಲಲ್ಲಿಗೇ ಹೊಂದಿಕೊಂಡಿರುವ ಪ್ರಭೇದಗಳಿವೆ.

ಅದಕ್ಕೆ ತಕ್ಕಂತೆ ಲೀಮರ್‌ಗಳದು ಭಾರೀ ಆಹಾರ ವೈವಿಧ್ಯ: ಹಣ್ಣು, ಹೂವು, ಎಲೆ, ಮಕರಂದ, ವೃಕ್ಷ ತೊಗಟೆ, ವೃಕ್ಷ ರಸ, ಕೀಟಗಳು, ಪುಟ್ಟ ಪ್ರಾಣಿಗಳು... ಹೀಗೆಲ್ಲ. ವಿಶೇಷ ಏನೆಂದರೆ, ಚಿಕ್ಕ ಗಾತ್ರದ ಲೀಮರ್‌ಗಳೆಲ್ಲ ನಿಶಾಚರರು; ದೊಡ್ಡ ಗಾತ್ರದವುಗಳದು ಹಗಲಿನ ಜೀವನ. ಲೀಮರ್‌ಗಳದು ಸ್ನೇಹಮಯ ಗುಂಪು ಜೀವನ ಕ್ರಮ. ಐವತ್ತರವರೆಗಿನ ಸಂಖ್ಯೆಗಳಲ್ಲಿ ಒಟ್ಟೊಟ್ಟಾಗಿ ಬದುಕುವ ಪ್ರತಿ ಗುಂಪಿಗೂ ಪ್ರೌಢ, ಬಲಿಷ್ಠ ಹೆಣ್ಣೊಂದರ ಮುಂದಾಳತ್ವ. ಧ್ವನಿ ಸಂಕೇತಗಳಿಂದ ಸಹಚರರೊಡನೆ ಸಂಪರ್ಕ, ವಾಸನೆಯಿಂದಲೇ ಆಹಾರ ಪತ್ತೆ ಮತ್ತು ಇರುಳಿನಲ್ಲೂ ಕಾಣಬಲ್ಲ ದೃಷ್ಟಿ ಶಕ್ತಿ ಲೀಮರ್‌ಗಳಿಗೆ ನಿಸರ್ಗದತ್ತ ಸಾಮರ್ಥ್ಯಗಳು. ಲೀಮರ್‌ಗಳ ಗರಿಷ್ಠ ಆಯುಷ್ಯ 30 ವರ್ಷ.

ವಿಪರ್ಯಾಸ ಏನೆಂದರೆ, ಕೇವಲ ಎಂಟೊಂಬತ್ತು ಪ್ರಭೇದಗಳನ್ನು ಬಿಟ್ಟು ಉಳಿದ ಎಲ್ಲ ಲೀಮರ್ ಪ್ರಭೇದಗಳೂ ಅಳಿವ ಅಂಚಿನಲ್ಲಿವೆ. ಮಡಗಾಸ್ಕರ್‌ನಲ್ಲಿ ಸಂಭವಿಸುತ್ತಿರುವ ಮಾನವರ ದುರಾಕ್ರಮಣಗಳೇ ಈ ದುರಂತಕ್ಕೆ ಏಕೈಕ ಕಾರಣ.

■ ಎನ್. ವಾಸುದೇವ್